1038 (1485) ಶ್ರೀ ಬೋಪಯ್ಯ ಕೆ.ಜಿ. (ಮಡಿಕೇರಿ):– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಕೊಡಗು ಜಿಲ್ಲೆಯಲ್ಲಿ ಪ್ರೌಢಶಾಲೆಗಳಲ್ಲಿ ಮಧ್ಯಾಹ್ನದ ಬಿಸಿಯೂಟ ಯೋಜನೆ ಎಲ್ಲಾ ಶಾಲೆಗಳಲ್ಲಿ ಪ್ರಾರಂಭವಾಗಿದೆಯೇ ;

ಆ) ಪ್ರಾರಂಭವಾಗದೇ ಇದ್ದಲ್ಲಿ ಯಾವ ಶಾಲೆಗಳಲ್ಲಿ ಬಾಕಿ ಇದೆ, ಇದಕ್ಕೆ ಕಾರಣವೇನು; (ತಾಲ್ಲೂಕುವಾರು ವಿವರ ನೀಡುವುದು)

ಇ) ಈ ಯೋಜನೆಯ ಅನುಷ್ಠಾನಕ್ಕಾಗಿ ಜಿಲ್ಲೆಗೆ ಎಷ್ಟು ಅನುದಾನ ಬಿಡುಗಡೆಯಾಗಿದೆ;

ಈ) ಬಿಸಿಯೂಟ ಅನುಷ್ಠಾನಕ್ಕೆ ಗ್ಯಾಸ್ ಸಿಲಿಂಡರ್‌ಗಳ ಲಭ್ಯತೆ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಇದನ್ನು ಭರಿಸಲು ಸರ್ಕಾರ ಏನು ಕ್ರಮ ಕೈಗೊಳ್ಳಲಾಗಿದೆ ?

ಶ್ರೀ ಬಸವರಾಜ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–

ಅ) ಎಲ್ಲ ಸರ್ಕಾರಿ ಮತ್ತು ಖಾಸಗಿ ಅನುದಾನಿತ ಪ್ರೌಢ ಶಾಲೆಗಳಲ್ಲಿ ಪ್ರಾರಂಭಿಸಲಾಗಿದೆ.

ಆ) ಉದ್ಭವಿಸುವುದಿಲ್ಲ.

ಇ) 2007–08ನೇ ಸಾಲಿಗೆ ಯೋಜನೆಯ ಅನುಷ್ಠಾನಕ್ಕೆ ಜಿಲ್ಲೆಗೆ ರೂ. 300.37 ಲಕ್ಷ ಅನುದಾನ ಬಿಡುಗಡೆಯಾಗಿರುತ್ತದೆ.

ಈ) ಬಂದಿದೆ. ಅನಿಲ ಸಮಸ್ಯೆಯನ್ನು ಸಂಬಂಧಿಸಿದ ಆಯಿಲ್ ಕಂಪನಿಗಳನ್ನು ಸಂಪರ್ಕಿಸಿ ಎಲ್ಲಾ ಶಾಲೆಗಳಿಗೆ ನಿಗದಿತ ಅನಿಲ ಸಿಲಿಂಡರ್‌ಗಳನ್ನು ನಿಗದಿತ ಸಮಯದೊಳಗೆ ಸರಬರಾಜು ಮಾಡಲು ಕ್ರಮ ಕೈಗೊಳ್ಳಲಾಗಿದೆ.

1039 (1486) ಶ್ರೀ ಬೋಪಯ್ಯ ಕೆ.ಜಿ. (ಮಡಿಕೇರಿ):– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಕೊಡಗು ಜಿಲ್ಲೆಯಲ್ಲಿ ಒಟ್ಟು ಎಷ್ಟು ಸರ್ಕಾರಿ ಮತ್ತು ಅನುದಾನಿತ ಪ್ರೌಢಶಾಲೆಗಳಿವೆ; (ತಾಲ್ಲೂಕುವಾರು ವಿವರಗಳನ್ನು ನೀಡುವುದು)

ಆ) ಈ ಶಾಲೆಗಳಲ್ಲಿ ಎಷ್ಟು ಶಿಕ್ಷಕರ ಕೊರತೆ ಇದೆ ; (ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ಇರುವ ಶಿಕ್ಷಕರ ಕೊರತೆಯ ತಾಲ್ಲೂಕುವಾರು ವಿವರವನ್ನು ಪ್ರತ್ಯೇಕವಾಗಿ ನೀಡುವುದು)

ಇ) ಅನುದಾನಿತ ಶಾಲಾ ಶಿಕ್ಷಕರ ಕೊರತೆಯನ್ನು ತುಂಬಲು ಕೈಗೊಂಡಿರುವ ಕ್ರಮಗಳೇನು ;

ಈ) ಇಲ್ಲಿಯವರೆಗೆ ಎಷ್ಟು ಅನುದಾನಿತ ಶಾಲೆಗಳ ಶಿಕ್ಷಕರನ್ನು ಭರ್ತಿ ಮಾಡಲಾಗಿದೆ? (ವಿವರಗಳನ್ನು ತಾಲ್ಲೂಕುವಾರು ಶಾಲೆವಾರು ನೀಡುವುದು)

ಶ್ರೀ ಬಸವರಾಜ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-

ಅ)

ಪ್ರೌಢಶಾಲೆಗಳು

ತಾಲ್ಲೂಕು	ಸರ್ಕಾರಿ	ಅನುದಾನಿತ
ಮಡಿಕೇರಿ	08	12
ಸೋಮವಾರಪೇಟೆ	11	14
ವಿರಾಜಪೇಟೆ	22	16
ಒಟ್ಟು	41	42

ಆ)

ಶಿಕ್ಷಕರ ಕೊರತೆ

ತಾಲ್ಲೂಕು	ಸರ್ಕಾರಿ	ಅನುದಾನಿತ
ಮಡಿಕೇರಿ	08	35
ಸೋಮವಾರಪೇಟೆ	11	26
ವಿರಾಜಪೇಟೆ	22	25
ಒಟ್ಟು	41	86

ಇ) ಸರ್ಕಾರಿ ಆದೇಶ ಸಂಖ್ಯೆ : ಇಡಿ 46 ಎಸ್‌ಇಪಿ 2006, ದಿನಾಂಕ : 12-04-2006ರ ಅನ್ವಯ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿಯನ್ನು ನೀಡಲಾಗಿದ್ದು, ಅದರಂತೆ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.

ಈ) ಇಲ್ಲಿಯವರೆಗೆ ಒಟ್ಟು 49 ಖಾಲಿ ಹುದ್ದೆಗಳಿಗೆ ನೇಮಕ ಮಾಡಿಕೊಂಡಿರುವುದನ್ನು ಅನುಮೋದನೆ ಮಾಡಲಾಗಿದೆ (ಮಾಹಿತಿ ಅನುಬಂಧ 1ರಲ್ಲಿ ಅಡಕಗೊಳಿಸಿದೆ).

ಅನುಬಂದ-1

ಕ್ರ ಸಂ.	ಶಾಲೆಯ ಹೆಸರು	ಅನುದಾನಿತ ಶಾಲೆಗಳಲ್ಲಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಿಯವುದನ್ನು ಅನುಮೋದನೆ ಮಾಡಿಯವುದು.
	ಸೋಮವಾರಪೇಟೆ ತಾಲ್ಲೂಕು	
1	ಫಾತಿಮಾ ಪ್ರೌಢಶಾಲೆ ಕುಶಾಲನಗರ	03
2	ಹೆಬ್ಬಾಲೆ ಪ್ರೌಢಶಾಲೆ ಹೆಬ್ಬಾಲೆ	01
3	ಚಿಸ್ಮಮ್ಮ ಪ.ಪೂ.ಕಾಲೇಜು.ಮಾದಾಪುರ	01
4	ಸುಂಠಿಕೊಪ್ಪನಾಡು ಪ್ರೌಢಶಾಲೆ ಕೂಡಗರಹಳ್ಳಿ	02
5	ಶನಿವಾರಸಂತೆ ಪದವಿ ಪೂರ್ವ ಕಾಲೇಜು	05
6	ಕೊಡ್ಲಿಪೇಟೆ ಪ.ಪೂ.ಕಾ.ಕೊಡ್ಲಪೇಟೆ	01
	ಒಟ್ಟು	13
	ಮಡಿಕೇರಿ ತಾಲ್ಲೂಕು	
1	ಅರಣ ಪದವಿ ಪೂರ್ವ ಕಾಲೇಜು ಜೇರಂಬಾಣೆ	03
2	ಮುರ್ನಾಡು ಪ್ರೌಢಶಾಲೆ ಮುರ್ನಾಡು ಮಡಿಕೇರಿ	02
3	ಉದಯ ಪ್ರೌಢಶಾಲೆ ಬೆಟಗೇರಿ	02
4	ಸಂಪಾಜೆ ಪ.ಪೂ.ಕಾಲೇಜು ಸಂಪಾಜೆ	03
5	ಸಂತ ಮೈಕಲ್ ಪ್ರೌಢಶಾಲೆ ಮಡಿಕೇರಿ	04
6	ಭಾರತಿ ಪದವಿ ಪೂರ್ವ ಕಾಲೇಜು ಮರಗೋಡು	03
7	ನಲಿಯಂಡಡ ಪ್ರೌಢಶಾಲೆ ಚೆಯ್ಯಂಡಾಣೆ	02
8	ನೇತಾಜಿ ಪ್ರೌಢಶಾಲೆ ಬಿಳುಮಾವಟಿ	02
	ಒಟ್ಟು	21
	ವಿರಾಜಪೇಟೆ ತಾಲ್ಲೂಕು	
1	ಎಂ.ಪಿ.ಎಸ್.ಪ್ರೌಢಶಾಲೆ ಹೊಸ್ಕೆರೆಪ್ಪಸಂತೆ	03
2	ಅಮ್ಮತ್ತಿ ಪ್ರೌಢಶಾಲೆ ಅಮ್ಮತ್ತಿ	01
3	ಮದೀನಾಡು ಪ್ರೌಢಶಾಲೆ ಬಿಯನಾಣೆ	01
4	ಜನತಾ ಪ್ರೌಢಶಾಲೆ ಹುದಿಕೇರಿ	01
5	ಶ್ರೀ ಮಂಗಲ ಪ್ರೌಢಶಾಲೆ ಶ್ರೀಮಂಗಲ	04
6	ವಿಜಯಲಕ್ಷ್ಮೀ ಪ.ಪೂ.ಕಾ.ಬಾಳೆಲೆ	04
7	ಸರಸ್ವತಿ ಅನ್ನಮ್ಮ ಪ್ರೌಢಶಾಲೆ ವಿರಾಜಪೇಟೆ	01
	ಒಟ್ಟು	15
	ಎಲ್ಲಾ ತಾಲ್ಲೂಕು ಸೇರಿ ಒಟ್ಟು	49